**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ. 2800/2022**

ಪಿ.ಡಬ್ಲ್ಯೂಃ 1

ಸಿ.ಡಬ್ಲ್ಯೂಃ 1

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಅರುಣ್ ಕುಮಾರ್ ಟಿ ಆರ್ |
| ತಂದೆಯ ಹೆಸರುಃ | ಃ | ರುದ್ರಪ್ಪ |
| ವಯಸ್ಸು | ಃ | **30 ವರ್ಷ** |
| ಉದ್ಯೋಗ | ಃ | ವ್ಯಾಪಾರ |
| ವಾಸಸ್ಥಳ | ಃ | ತರೀಕೆರೆ |

**ದಿನಾಂಕ: 19-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ ಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಮೃತ ಆನಂದ್ ನನ್ನ ಅಣ್ಣ. ಚಾಸಾ-2 ನನ್ನ ಅತ್ತಿಗೆ. ದಿಃ 23-06-2022 ರಂದು ಕಡೂರಿನಲ್ಲಿರುವ ಕಲ್ಲಾಪುರ ಗ್ರಾಮದಲ್ಲಿ ಮದುವೆಗೆ ನನ್ನ ಅಣ್ಣ ಅತ್ತಿಗೆ ಹೋಗಿದ್ದರು. ಕೆಎ 18 ಇ ಎ 6518 ಯಮಹಾ ಕಂಪನಿಯ ದ್ವಿಚಕ್ರ ವಾಹನದಲ್ಲಿ ಹೋಗಿದ್ದು, ಮದುವೆ ಮುಗಿಸಿಕೊಂಡು ವಾಪಾಸ್ಸು ಬರುವಾಗ ಶಿವಪುರ ಹತ್ತಿರ ಎನ್ ಹೆಚ್ 206 ಹೈವೆ ರಸ್ತೆಯಲ್ಲಿ ತರೀಕೆರೆಯಿಂದ ಬರುತ್ತಿದ್ದ ಮಾರುತಿ ಶಿಫ್ಟ್ ಕೆಎ 18 ಎಂ ಸಿ 8865 ಕಾರು ರಸ್ತೆಯಲ್ಲಿ ಎದುರುಗಡೆಯಿಂದ ನೇರವಾಗಿ ಬಂದು ನನ್ನ ಅಣ್ಣ ಓಡಿಸುತ್ತಿರುವ ದ್ವಿಚಕ್ರ ವಾಹನಕ್ಕೆ ಗುದ್ದಿದ ಪರಿಣಾಮ ನಮ್ಮ ಅಣ್ಣನಿಗೆ ತೀವ್ರ ಸ್ವರೂಪದ ಗಾಯವಾಗಿ ಸ್ಥಳದಲ್ಲೇ ಮೃತಪಟ್ಟಿರುತ್ತಾರೆ. ನನ್ನ ಅತ್ತಿಗೆಗೆ ತೀವ್ರ ಸ್ವರೂಪದ ಗಾಯವಾಗಿ ಕಾಲಿಗೆ ಪೆಟ್ಟಾಗಿ ಸೊಂಟ ಮುರಿದಿರುತ್ತದೆ. ನನ್ನ ಸ್ನೇಹಿತ ಶರತ್ ನನಗೆ ಮಧ್ಯಾಹ್ನ 2-30 ಗಂಟೆಗೆ ನನಗೆ ಕರೆ ಮಾಡಿ ಅಪಘಾತವಾದ ವಿಚಾರವನ್ನು ತಿಳಿಸಿರುತ್ತಾನೆ. ನಂತರ ನಾನು ಪಕ್ಕದ ಮನೆಯ ಲೋಕೇಶ್ ರವರೊಂದಿಗೆ ಬಸ್ಸಿನಲ್ಲಿ ಘಟನಾ ಸ್ಥಳಕ್ಕೆ ಹೋಗಿ ನೋಡಿದಾಗ ಕಾರು ಮತ್ತು ಬೈಕ್ ನುಜ್ಜಾಗಿ ಅಲ್ಲೇ ಬಿದ್ದಿದ್ದು, ನನ್ನ ಅಣ್ಣ ಅತ್ತಿಗೆಯನ್ನು ಬೀರೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿರುವ ಬಗ್ಗೆ ತಿಳಿಸಿದರು. ನಂತರ ನಾನು ಬೀರೂರಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಅಣ್ಣ ತೀರಿಹೋಗಿರುವ ವಿಚಾರ ತಿಳಿದಿದ್ದು, ನಮ್ಮ ಅತ್ತಿಗೆಗೆ ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಕಳುಹಿಸಿರುವ ಬಗ್ಗೆ ತಿಳಿಸಿರುತ್ತಾರೆ. ನಂತರ ನಾನು ಸಂಜೆ 4-00 ಗಂಟೆ ಸಮಯಕ್ಕೆ ಬೀರೂರಿನ ಪೊಲೀಸ್ ಠಾಣೆಗೆ ಹೋಗಿ ನನ್ನ ತಂದೆಯ ಸ್ನೇಹಿತರೊಂದಿಗೆ

ದೂರನ್ನು ನಾನು ಹೇಳಿದಂತೆ ಬರೆಸಿ ನೀಡಿರುತ್ತೇನೆ. ಸಂಜೆ 6-30 ಗಂಟೆ ಸಮಯಕ್ಕೆ ಪೊಲೀಸರು ಶವ ತನಿಖೆ ಮಾಡಿ ನನ್ನ ಅಣ್ಣನ ಮೃತ ದೇಹವನ್ನು ನಮಗೆ ನೀಡಿರುತ್ತಾರೆ. ನಂತರ 25 ನೇ ದಿನಾಂಕದಂದು ಪೊಲೀಸರು ಅಪಘಾತವಾದ ಸ್ಥಳದಲ್ಲಿ ಸ್ಥಳ ಮಹಜರ್ ಮಾಡಿದ್ದು, ಸ್ಥಳವನ್ನು ನಾನು ತೋರಿಸಿದ್ದು, ಮಹಜರ್ ಗೆ ಸಹಿ ಮಾಡಿರುತ್ತೇನೆ. ನಂತರ ಪೊಲೀಸರು ಪೊಲೀಸ್ ಠಾಣಾ ಆವರಣದಲ್ಲಿದ್ದ ಕಾರು ಮತ್ತು ಬೈಕ್ ಅಮಾನತ್ತು ಮಹಜರ್ ಜರುಗಿಸಿದ್ದು, ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ದೂರಾಗಿದ್ದು, ಸದರಿ ದಾಖಲೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಎರಡು ಛಾಯಚಿತ್ರಗಳನ್ನು ತೋರಿಸಲಾಗಿದ್ದು, ಅದರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-3 ಮತ್ತು ನಿಪಿ-4 ಎಂದು ಗುರುತಿಸಲಾಯಿತು.

ಸಾಕ್ಷಿಗೆ ಮತ್ತೊಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ವಾಹನ ಅಮಾನತ್ತು ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಎರಡು ಛಾಯಚಿತ್ರಗಳನ್ನು ತೋರಿಸಲಾಗಿದ್ದು, ಅವುಗಳಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-6 ಮತ್ತು ನಿಪಿ-7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕಃ 23-06-2022 ರಂದು ಮಧ್ಯಾಹ್ನ 2-30 ಗಂಟೆ ಸಮಯದಲ್ಲಿ ನನ್ನ ಅಣ್ಣ ಕೆಎ 18 ಇ ಎ 6518 ಯಮಹಾ ಕಂಪನಿಯ ದ್ವಿಚಕ್ರ ವಾಹನದಲ್ಲಿ ಚಾಸಾ-2 ರವರನ್ನು ಕೂರಿಸಿಕೊಂಡು ಸಂಬಂಧಿಕರ ಮದುವೆಗೆ ಹೋಗಿ ವಾಪಾಸ್ಸು ಶಿವಪುರದ ಹತ್ತಿರ ಬರುತ್ತಿರುವಾಗ ತರೀಕೆರೆ ಕಡೆಯಿಂದ

ಬೀರೂರು ಕಡೆಗೆ ಕೆಎ 19 ಎಂ ಸಿ 8865 ನಂಬರಿನ ಮಾರುತಿ ಸ್ವಿಫ್ಟ್ ಕಾರನ್ನು ಆರೋಪಿಯು ನಿರ್ಲಕ್ಷತನದಿಂದ ಅತೀವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬೈಕ್ ಗೆ ಡಿಕ್ಕಿಪಡಿಸಿದ ಪರಿಣಾಮ ನನ್ನ ಅಣ್ಣ ಆನಂದ್ ರವರಿಗೆ ತಲೆ, ಮತ್ತು ಮುಖ ಕೈ ಕಾಲಿಗೆ ತೀವ್ರ ತರಹದ ಪೆಟ್ಟಾಗಿ ಸ್ಥಳದಲ್ಲೇ ಮೃತ ಪಟ್ಟಿರುತ್ತಾರೆಂದರೆ ಸರಿ ಮತ್ತು ಚಾಸಾ-2 ರವರಿಗೆ ಬಲಗಾಲಿನ ಮೂಳೆ ಮತ್ತು ಬಲಗಾಲಿನ ರಂಡಿ ಹತ್ತಿರ ಮೂಳೆ ಮುರಿದಿದ್ದು, ತೀವ್ರ ಸ್ವರೂಪದ ಗಾಯವುಂಟಾಗಿರುತ್ತದೆ ಎಂದರೆ ಸರಿ. ಸದರಿ ಅಪಘಾತಕ್ಕೆ ಆರೋಪಿಯ ನಿರ್ಕ್ಷತನವೇ ಕಾರಣ ಎಂದರೆ ಸರಿ. ಆರೋಪಿಯು ಅತೀವೇಗ ಮತ್ತು ಅಜಾಗರೂಕತೆಯಿಂದ ವಾಹನವನ್ನು ಚಾಲನೆ ಮಾಡಿರುತ್ತಾರೆಂದರೆ ಸರಿ.

**<u>ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.</u>**

ಅಪಘಾತವಾದ ಸ್ಥಳದಲ್ಲೇ ನಾನು ಹಾಜರಿರಲಿಲ್ಲ. ಅಪಘಾತವಾದ ಸ್ಥಳಕ್ಕೂ ಹಾಗೂ ನಾನು ಇದ್ದ ಸ್ಥಳಕ್ಕೂ 30 ಕಿ ಮಿ ಅಂತರ ಇತ್ತು ಎಂದರೆ ಸರಿ. ನನಗೆ ಅಪಘಾತದ ವಿಚಾರ ತಿಳಿಸಿದ ನಂತರ ಸ್ಥಳಕ್ಕೆ ಹೋಗಲು 1 ತಾಸು ಬೇಕಾಯಿತು ಎಂದರೆ ಸರಿ. ನಾನು ಸ್ಥಳಕ್ಕೆ ಭೇಟಿ ನೀಡಿದಾಗ ಸ್ಥಳೀಯರು 10 ಜನ ಇದ್ದರು. ಸ್ಥಳದಲ್ಲಿ ಇದ್ದ ಜನರು ಅಪಘಾತವಾದ ಬಗ್ಗೆ ನನಗೆ ಮಾಹಿತಿ ನೀಡಿದ್ದು, ಅವರು ಯಾರು ಅವರ ಹೆಸರು ನನಗೆ ತಿಳಿದಿರುವುದಿಲ್ಲ. ಅಪಘಾತವಾದ ಸ್ಥಳದಲ್ಲೇ ಡಿವೈಡರ್ ಮುರಿದು ಬಿದ್ದಿದ್ದು ನನ್ನ ಅಣ್ಣನ ಶರ್ಟ ರಸ್ತೆಯಲ್ಲೇ ಬಿದ್ದಿರುತ್ತದೆ. ನನ್ನ ಅಣ್ಣನ ಶರ್ಟಗೆ ರಕ್ತದ ಕಲೆಗಳು ಆಗಿತ್ತು. ಅಪಘಾತದ ಸ್ಥಳದಲ್ಲಿ ಚೂರಾದ ಗಾಜಿನ ಚೂರುಗಳು ಬಿದ್ದಿದ್ದವು. ಬೈಕಿನ ಡೂಮ್ ಲೈಟುಗಳು ಹಾಗೂ ಕಾರಿನ ಹೆಡ್ ಲೈಟುಗಳು ಪುಡಿ ಪುಡಿ ಆಗಿದ್ದು, ಹೆಲ್ಮೆಟ್ ಸಹ ಅಲ್ಲಿ ಬಿದ್ದಿತ್ತು. ನಾನು ಬೀರೂರಿನ ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಅಣ್ಣ ಸ್ಥಳದಲ್ಲೇ ಮೃತ ಪಟ್ಟಿರುತ್ತಾರೆಂದು ವೈದ್ಯರು ನನಗೆ ತಿಳಿಸಿರುತ್ತಾರೆ. ನಂತರ ನನ್ನ ಅತ್ತಿಗೆ ಚಾಸಾ-2 ರವರು ಆಸ್ಪತ್ರೆಯಲ್ಲಿ ಇದ್ದು ಅವರಿಗೆ ಪ್ರಜ್ಞೆ ಇರಲಿಲ್ಲ. ಅಪಘಾತ ಸ್ಥಳದಲ್ಲಿ ಅಪಘಾತವನ್ನು ನೋಡಿದವರು ಯಾರು ಎಂದು ನನಗೆ ಮಾಹಿತಿ ಇಲ್ಲ. ಅಪಘಾತ ಹೇಗಾಯಿತು ಎಂದು ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ. ನಿಪಿ-1 ದೂರನ್ನು ಯಾರು ಬರೆದರು ಎಂದು ನನಗೆ ಮಾಹಿತಿ ಇಲ್ಲ. ದೂರನ್ನು ಬರೆಯುವ ಸಮಯದಲ್ಲಿ ಇಬ್ಬರು ಮೂವರು ಹಾಜರಿದ್ದರು. ನಾನು

ಹಾಗೂ ಇತರರು ನೀಡಿದ ಮಾಹಿತಿ ಮೇರೆಗೆ ದೂರನ್ನು ಬರೆದಿರುತ್ತಾರೆ. ದೂರಿನಲ್ಲಿ ಬರೆದಿರುವ ಮಾಹಿತಿ ನಿಮಗೆ ತಿಳಿದಿರುವುದಿಲ್ಲ, ಪೊಲೀಸರ ಹೇಳಿಕೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ನನ್ನ ಅಣ್ಣ ಚಲಾಯಿಸುತ್ತಿದ್ದ ದ್ವಿಚಕ್ರ ವಾಹನ ನನ್ನ ಹೆಸರಿನಲ್ಲಿ ಇರುತ್ತದೆ. ನಾನು ನಮ್ಮ ಅಣ್ಣ ಒಟ್ಟು ಕುಟುಂಬದಲ್ಲಿ ವಾಸವಿರುತ್ತೇವೆ ಎಂದರೆ ಸರಿ. ನನ್ನ ಅಣ್ಣನಿಗೆ ದ್ವಿಚಕ್ರ ವಾಹನವನ್ನು ಓಡಿಸಲು ಲೈಸನ್ಸ್ ಇರಲಿಲ್ಲ ಎಂದರೆ ಸರಿ. ಲೈಸನ್ಸ ಇಲ್ಲದೇ ಇರುವವರಿಗೆ ವಾಹನ ಚಲಾಯಿಸಲು ನೀಡಬಾರದು ಎಂದು ನನಗೆ ತಿಳಿದಿದೆ. ಆದರೂ ಸಹ ಅವರಿಗೆ ವಾಹನ ಚಲಾಯಿಸಲು ನೀಡಿರುತ್ತೀರಾ ಎಂದರೆ ಸರಿ. ನಿಮ್ಮ ಅಣ್ಣ ಚಾಲನಾ ಪರವಾನಗಿ ಇಲ್ಲದೇ ನಿರ್ಲಕ್ಷತದಿಂದ ವಾಹನವನ್ನು ಚಲಾಯಿಸಿ ಅವರೇ ವಾಹನವನ್ನು ಬಲಭಾಗಕ್ಕೆ ಅಚಾನಕ್ಕಾಗಿ ತಿರುಗಿಸಿ ಆರೋಪಿಗೆ ಸಂಬಂಧಪಟ್ಟ ಕಾರಿಗೆ ನಿರ್ಲಕ್ಷತದಿಂದ  ಡಿಕ್ಕಿಪಡಿಸಿರುತ್ತಾರೆಂದರೆ ಸರಿಯಲ್ಲ. ನನ್ನ ಅಣ್ಣ ಅತ್ತಿಗೆ ಮದುವೆಯಾಗಿ ಒಂದು ತಿಂಗಳು ಆಗಿತ್ತು. ಪೊಲೀಸರು ಅಪಘಾತವಾದ ಮೂರು ದಿನದ ನಂತರ ಅಂದರೆ 25 ನೇ ತಾರೀಖು ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿರುತ್ತಾರೆ. ಅದೇ ಸ್ಥಳದಲ್ಲಿ ಅಪಘಾತವಾಯಿತು ಎಂದು ಯಾವುದೇ ಗುರುತು ಇರಲಿಲ್ಲ ಎಂದರೆ ಸಾಕ್ಷಿ ಇರುತ್ತದೆ ಎಂದುನುಡಿದಿರುತ್ತಾರೆ. ಡಿವೈಡರ್ ಬಾಲಭಾಗದ ಕಡೆ ಇರುತ್ತದೆ ಎಂದರೆ ಸಾಕ್ಷಿ ಬಲಭಾಗದ ಕಡೆ ಇರುತ್ತದೆ ಎಂದು ನುಡಿದಿರುತ್ತಾರೆ. ಅಪಘಾತವಾದ ಸ್ಥಳದ ಚಕ್ಕುಬಂದಿ ನನಗೆ ತಿಳಿದಿರುವುದಿಲ್ಲ. ಅಪಘಾತವಾದ ಸ್ಥಳಕ್ಕೂ ಡಿವೈಡರ್ ಗೆ 20 ರಿಂದ 30 ಮೀಟರ್ ಅಂತರವಿರುತ್ತದೆ ಎಂದರೆ ಸರಿಯಲ್ಲ. ರಸ್ತೆಯ ಮೇಲೆ ವಾಹನಗಳು ವೇಗವಾಗಿ ಗುದ್ದಿರುವ ಬಗ್ಗೆ ಕ್ರಾಶ್ ಮಾರ್ಕಗಳು ಇದ್ದವು.  ಮಹಜರ್ ಮಾಡುವ ಸಮಯದಲ್ಲಿ ಪೊಲೀಸ್ ಸಿಬ್ಬಂದಿಗಳು ಸೇರಿ 6 ಜನ ಇದ್ದೆವು. ಮಹಜರ್ ನ್ನು ಪೊಲೀಸರು ಬರೆದಿರುತ್ತಾರೆ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುತ್ತದೆ. ಮಹಜರ್ ಗೆ ಎಷ್ಟು ಜನ ಸಹಿ ಮಾಡಿರುತ್ತಾರೆಂದರೆ ಸಾಕ್ಷಿ ಚಾಸಾ-3 ಮತ್ತು 4 ಸಹಿ ಮಾಡಿರುತ್ತಾರೆಂದು ನುಡಿದಿರುತ್ತಾರೆ. ಮಹಜರ್ ನಲ್ಲಿ ಬರೆದಿರುವ ವಿಚಾರ ನಿಮಗೆ ತಿಳಿದಿರುವುದಿಲ್ಲ ಹಾಗೂ ನೀವು ಸ್ಥಳದಲ್ಲಿ ಇರಲಿಲ್ಲ ಪೊಲೀಸರು ಮತ್ತು ನೀವು ಸೇರಿ ಸದರಿ ಮಹಜರ್ ನ್ನು ಸೃಷ್ಠಿ ಮಾಡಿರುತ್ತೀರಾ ಎಂದರೆ ಸರಿಯಲ್ಲ.  ವಾಹನ ಅಮಾನತ್ತು ಮಹಜರ್ ಗೆ  ಸ್ಥಳ ಮಹಜರ್ ಗೆ ಸಹಿ ಮಾಡಿದ ವ್ಯಕ್ತಿಗಳೇ ಸಹಿ ಮಾಡಿರುತ್ತಾರೆ ಅದನ್ನು ಪೊಲೀಸರು ಬರೆದಿರುತ್ತಾರೆ. ನಿಮ್ಮ

ಅಣ್ಣನ ನಿರ್ಲಕ್ಷತನದಿಂದ ಅಪಘಾತ ಆಗಿದ್ದರೂ ಸಹ ಪೊಲೀಸರ ಜೊತೆ ಸೇರಿ ಸುಳ್ಳು ದೂರನ್ನು ನೀಡಿರುತ್ತಿರಾ ಎಂದರೆ ಸರಿಯಲ್ಲ. ನಿಪಿ-1 ರಿಂದ 7 ದಾಖಲಾತಿಗಳನ್ನು ಈ ಪ್ರಕರಣಕ್ಕಾಗಿ ಸೃಷ್ಠಿ ಮಾಡಿರುತ್ತಿರಾ ಎಂದರೆ ಸರಿಯಲ್ಲ. ನೀವು ಚಾಸಾ-2 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**